ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 29 ॥ ಸಂಚಿಕೆ : 10॥ UDP/1263/2018-20 || R.NO.50495/91 ॥ ತಾರೀಕು : 02–04–2019 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ಪ್ರಚಾರದ ಭರಾಟೆ ಆರಂಭ

ಉಡುಪಿ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ , ಹಾಗೂ ಶಿವಮೊಗ್ಗ ಬೈಂದೂರು ಲೋಕಸಭಾ ಕ್ಷೇತ್ರದ ಚುನಾವಣೆಯ ಪ್ರಚಾರದ ಭರಾಟೆ ಈಗಾಗಲೇ ಆರಂಭವಾಗಿದೆ. ಉಡುಪಿ ಚಿಕ್ಕಮಗಳೂರು ಲೋಕಸಭಾ ಚುನಾವಣೆ ಎಪ್ರಿಲ್ 18 ಕ್ಕೆ ನಡೆಯುವುದರಿಂದ ಪಕ್ಷಗಳ ವತಿಯಿಂದ ಬಿರುಸಿನ ಚಟುವಟಿಕೆ ಗ್ರಾಮೀಣ ಪ್ರದೇಶದಲ್ಲಿ ನಡೆಯುತ್ತಿದೆ.

ಉಡುಪಿ ಚಿಕ್ಕಮಗಳೂರು ಲೋಕಸಭಾ ಚುನಾವಣೆಗೆ ಒಟ್ಟು 12 ಅಭ್ಯರ್ಥಿಗಳು ಸ್ಪರ್ಧಿಸಿದ್ದು ಮುಖ್ಯ ಸ್ಪರ್ಧೆ ಬಿಜೆಪಿಯ ಶೋಭಾಕರಂದ್ಲಾಜೆ ಹಾಗೂ ಜೆಡಿಎಸ್ ಕಾಂಗ್ರೆಸ್ ಮೈತ್ರಿ ಅಭ್ಯರ್ಥಿ ಪ್ರಮೋದ್ ಮಧ್ವರಾಜ್ ನಡುವೆ ನಡೆಯಲಿದೆ. ಈಗಾಗಲೇ ಬಿಜೆಪಿ ಪಕ್ಷದ ವತಿಯಿಂದ ಶಾಸಕರು ಹಾಗೂ ಜಿಲ್ಲಾ ಮತ್ತು ಸ್ಥಳೀಯ ಕ್ಷೇತ್ರಗಳ ಅಧ್ಯಕ್ಷರು ಕಾರ್ಯಕರ್ತರ ಸಭೆಗಳನ್ನು ಪ್ರತಿ ದಿನ ಹಲವು ಕಡೆ ನಡೆಸುತ್ತಾ ಬಂದಿದ್ದಾರೆ.

ಬಿಜೆಪಿಯ ಅಭ್ಯರ್ಥಿ ಶೋಭಾ ಕರಂದ್ಲಾಜೆ ಪರ ಪ್ರಚಾರದ ಭರಾಟೆ ಜೋರಾಗಿದ್ದು ಈಗಾಗಲೇ ಬಿಜೆಪಿ ಪಕ್ಷದಿಂದ ಹಲವಾರು ಸಭೆಗಳು ಬಹುತೇಕ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ನಡೆದವು.

ಮೈತ್ರಿ ಪಕ್ಷಗಳ ಅಭ್ಯರ್ಥಿಯಾಗಿರುವ ಪ್ರಮೋದ್ ಮಧ್ವರಾಜ್ ಸಹ ಉತ್ಸಾಹದಿಂದ ಸ್ಪರ್ಧೆಗಿಳಿದಿದ್ದು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳನ್ನು ಸಮನ್ವಯಗೊಳಿಸಿ ಮುನ್ನಡೆಯಲು ಪ್ರಯತ್ನಿಸುತಿದ್ದಾರೆ. ಆದರೆ ಕರಾವಳಿ ಕ್ಷೇತ್ರಗಳಲ್ಲಿ ಕಾರ್ಯಕ್ರಮ ರೂಪಿಸುವುದರಲ್ಲಿ ಕಾಂಗ್ರೆಸ್ಸನ್ನೇ ಹೆಚ್ಚು ಅವರು ನೆಚ್ಚಿಕೊಂಡಂತಿದೆ. ಜೆಡಿಎಸ್ ಕರಾವಳಿಯ ಕಾರ್ಕಳ , ಕಾಪು , ಉಡುಪಿ , ಕುಂದಾಪುರ ಕ್ಷೇತ್ರಗಳಲ್ಲಿ ಉತ್ತಮ ಸಂಘಟನೆ ಹೊಂದಿಲ್ಲದಿರುವುದರಿಂದ ಕಾಂಗ್ರೆಸ್ ಜೆಡಿಎಸ್ ಚಿಹ್ನೆಯನ್ನು ಮುಂದಿಟ್ಟುಕೊಂಡು ಪ್ರಮೋದ್‌ರನ್ನು ಬೆಂಬಲಿಸುವ ಅನಿವಾರ್ಯತೆ ಉಂಟಾಗಿದೆ. ಆದರೂ ಪ್ರಮೋದ್ ಮಧ್ವರಾಜ್ ತಾನು ಎರಡು ಪಕ್ಷಗಳ ಪ್ರತಿನಿಧಿಯಾಗಿ ಕ್ಷೇತ್ರದ ಅಭಿವೃದ್ಧಿ ಸಾಧಿಸುವ ಸಂಸದನಾಗಿ ಪ್ರಾಮಾಣಿಕ ಸೇವೆ ಸಲ್ಲಿಸುತ್ತೇನೆ ಎಂದು ಹೇಳಿಕೊಂಡು ಬರುತ್ತಿದ್ದಾರೆ.

ಮೋದಿ ಅಲೆಯ ಶಕ್ತಿಯನ್ನು ಬಳಸಿಕೊಂಡು ಪ್ರಚಾರ ನಡೆಸುತ್ತಿರುವ ಶೋಭಾ ಕರಂದ್ಲಾಜೆ ಅವರಿಗೆ ಆಯಾ ಕ್ಷೇತ್ರದ ಶಾಸಕರೇ ಪ್ರಭಾವಶಾಲಿಗಳಾಗಿದ್ದಾರೆ. ಕುಂದಾಪುರ ಕ್ಷೇತ್ರದ ಹಾಲಾಡಿ ಶ್ರೀನಿವಾಸ ಶೆಟ್ಟಿ , ಉಡುಪಿ ಕ್ಷೇತ್ರದ ರಘುಪತಿ ಭಟ್ , ಕಾಪು ಕ್ಷೇತ್ರದ ಲಾಲಾಜಿ ಮೆಂಡನ್ ಹಾಗೂ ಕಾರ್ಕಳ ಕ್ಷೇತ್ರದ ಸುನಿಲ್ ಕುಮಾರ್ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಬಿಜೆಪಿಗೆ ಹೆಚ್ಚು ಬಹುಮತ ಬರುವಂತೆ ನೋಡಿಕೊಳ್ಳಲು ಕಾರ್ಯಕರ್ತರನ್ನು ಹುರಿದುಂಬಿಸುವುದರೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ಸಭೆಗಳನ್ನು ನಡೆಸುತ್ತಿದ್ದಾರೆ. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಶ್ರೀನಿವಾಸ ಪೂಜಾರಿ ಹಾಗೂ ಪಕ್ಷಗಳ ವಿವಿಧ ನಾಯಕರು ಶೋಭಾಕರಂದ್ಲಾಜೆ ಯೊಂದಿಗೆ ಸಭೆಗಳಲ್ಲಿ ಭಾಗವಹಿಸುತ್ತಿದ್ದು , ಕಾಂಗ್ರೆಸ್ ಜೆಡಿಎಸ್ ಮೈತ್ರಿಯನ್ನು ಟೀಕಿಸುವುದರೊಂದಿಗೆ ಮೋದಿ ಮತ್ತೆ ಪ್ರಧಾನಿಯಾಗಲು ಪ್ರತೀಯೊಬ್ಬ ಮತದಾರರು ಬಿಜೆಪಿಗೆ ಮತನೀಡಬೇಕೆಂದು ಮನವಿ ಮಾಡುತ್ತಾ ಇದ್ದಾರೆ.

### ಅಂತಿಮ ಕಣದಲ್ಲಿರುವ ಅಭ್ಯರ್ಥಿಗಳು

1. ಪಿ.ಪರಮೇಶ್ವರ (ಬಹುಜನ ಸಮಾಜ ಪಾರ್ಟಿ)
2. ಪ್ರಮೋದ್ ಮಧ್ವರಾಜ್ ಜನತಾದಳ (ಜಾತ್ಯಾತೀತ)
3. ಶೋಭಾ ಕರಂದ್ಲಾಜೆ (ಭಾರತೀಯ ಜನತಾ ಪಾರ್ಟಿ)
4. ಪಿ.ಗೌತಮ್ ಪ್ರಭು (ಶಿವಸೇನಾ)
5. ಎಂ.ಕೆ.ದಯಾನಂದ (ಪ್ರೌಟಿಸ್ಟ್ ಸರ್ವ ಸಮಾಜ)
6. ವಿಜಯ್ ಕುಮಾರ್ ಸಿಪಿಐ(ಎಂ.ಎಲ್) ರೆಡ್‌ಸ್ಟಾರ್
7. ಶೇಖರ ಹಾವಂಜೆ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಕರ್ನಾಟಕ)
8. ಸುರೇಶ್ ಕುಂದರ್ (ಉತ್ತಮ ಪ್ರಜಾಕೀಯ ಪಾರ್ಟಿ)
9. ಅಬ್ದುಲ್ ರೆಹ್‌ಮಾನ್ (ಪಕ್ಷೇತರ)
10. ಅಮೃತ್ ಶೆಣೈ ಪಿ (ಪಕ್ಷೇತರ)
11. ಮಗ್ಗಲಮಕ್ಕಿ ಗಣೇಶ್ (ಪಕ್ಷೇತರ)
12. ಕೆ.ಸಿ.ಪ್ರಕಾಶ್ (ಪಕ್ಷೇತರ)

ಕಾಂಗ್ರೆಸ್‌ಗೆ ಒಂದು ಕಡೆ ಜೆಡಿಎಸ್ ಚಿಹ್ನೆಯನ್ನು ಪ್ರಚಾರ ಮಾಡುವ ಮುಜುಗರವಾದರೆ ಇನ್ನೊಂದೆಡೆ ಕಾಂಗ್ರೆಸ್ ಪಕ್ಷಕ್ಕೆ ಲೋಕಸಭಾ ಸ್ಥಾನ ಬಿಟ್ಟುಕೊಡದಿರುವುದಕ್ಕೆ ಅಸಮಾಧಾನಗೊಂಡ ಹಲವು ನಾಯಕರು ಮುನಿಸಿಕೊಂಡು ಕುಳಿತಿದ್ದಾರೆ. ಅದರಲ್ಲೂ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ನಾಯಕರಲ್ಲಿ ಓರ್ವರಾದ ಅಮೃತ ಶೆಣೈ ಬಂಡಾಯವೆದ್ದು ಪಕ್ಷೇತರರಾಗಿ ಸ್ಪರ್ಧಿಸುತ್ತಿರುವುದು ತಲೆನೋವಾಗಿದೆ.

ಅಮೃತಶೆಣೈಯವರು ಗೆಲುವಿನ ಅಭ್ಯರ್ಥಿಯಾಗದಿದ್ದರೂ ಕಾಂಗ್ರೆಸ್ – ಜೆಡಿಎಸ್ ಮೈತ್ರಿ ಅಭ್ಯರ್ಥಿಗೆ ನಷ್ಟ ಉಂಟುಮಾಡುವಷ್ಟು ಸಂಪರ್ಕವನ್ನು ಹೊಂದಿದ್ದಾರೆ. ಅವರು ಪಡೆಯುವ ಮತಗಳೆಲ್ಲ ಕಾಂಗ್ರೆಸ್ ಜೆಡಿಎಸ್ ಮೈತ್ರಿಗೆ ನಷ್ಟವೆಂದೇ ಲೆಕ್ಕ .

ಈ ನಡುವೆ ಇತರ ಅಭ್ಯರ್ಥಿಗಳು ಹಲವು ಸಂಖ್ಯೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. ಶಿವಸೇನೆ ಸ್ಪರ್ಧೆ ಬಿಜೆಪಿಗೆ ಏನೂ ನಷ್ಟ ಉಂಟುಮಾಡದು ಎಂದು ಬಿಜೆಪಿ ಕಾರ್ಯಕರ್ತರು ಹೇಳುತ್ತಾರೆ. ಸಿಪಿಐ( ಎಂಎಲ್) ನಟ ಉಪೇಂದ್ರರ ಉತ್ತಮ ಪ್ರಜಾಕೀಯ ಪಾರ್ಟಿ , ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಹಾಗೂ ಪಕ್ಷೇತರರು ಯಾರಿಗೆ ನಷ್ಟ ಉಂಟುಮಾಡಲಿದ್ದಾರೆ ಎಂದು ಚುನಾವಣೆ ಹತ್ತಿರಬಂದಾಗಲೇ ಅರಿವಾಗುತ್ತದೆ. ಪಕ್ಷಗಳ ರಾಜ್ಯ ರಾಷ್ಟ್ರೀಯ ನಾಯಕರು ಪ್ರಚಾರಕ್ಕೆ ಬಂದಮೇಲೆ ಇನ್ನಷ್ಟು ಚಿತ್ರಣ ದೊರಕೀತು. ಚುನಾವಣಾ ಆಯೋಗ ಎಲ್ಲಾ ಚಟುವಟಿಕೆ ಮೇಲೆ ಕಣ್ಣಿಟ್ಟಿದೆ.







# ಕುಂಭಾಸಿ ಶ್ರೀ ಚಂಡಿಕಾ ದುರ್ಗಾಪರಮೇಶ್ವರೀ ದೇವಸ್ಥಾನದ ಪ್ರಥಮ ಪ್ರತಿಷ್ಠಾವರ್ಧಂತ್ಯುತ್ಸವ

ಕುಂದಾಪುರ ತಾಲೂಕಿನ ಕುಂಭಾಸಿ ರಾಷ್ಟ್ರೀಯ ಹೆದ್ದಾರಿ ಬಳಿ ನೂತನವಾಗಿ ನಿರ್ಮಾಣಗೊಂಡು ಕಳೆದ ವರ್ಷ ಪ್ರತಿಷ್ಠಾಪನೆ ಹಾಗೂ ಹತ್ತು ಹಲವು ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಿರುವ ಶ್ರೀ ಚಂಡಿಕಾ ದುರ್ಗಾಪರಮೇಶ್ವರೀ ದೇವಸ್ಥಾನದ ಪ್ರಥಮ ಪ್ರತಿಷ್ಠಾವರ್ಧಂತ್ಯುತ್ಸವ ಎಪ್ರಿಲ್ 17 ರಿಂದ 19 ರ ತನಕ 3 ದಿನಗಳ ಕಾಲ ನಡೆಯಲಿದೆ.

ಎಲ್ಲೂರು ಸೀಮೆಯ ಆಗಮ ಪಂಡಿತ ವೇ।ಮೂ।ಕುತ್ಯಾರು ಕೇಂಜ ಶ್ರೀಧರ ತಂತ್ರಿಗಳ ಮಾರ್ಗದರ್ಶನದಲ್ಲಿ ವೇ।ಮೂ। ಶ್ರೀಧರ ಉಪಾಧ್ಯಾಯರ ನೇತೃತ್ವದಲ್ಲಿ ಕ್ಷೇತ್ರ ಪುರೋಹಿತರಾದ ಅನಂತ ಪುರಾಣಿಕರ ಉಪಸ್ಥಿತಿಯಲ್ಲಿ ಪಯ್ಯಾನೂರಿನ ಜ್ಯೋತಿಷಿ ಎ.ವಿ.ಮಾಧವನ್ ಪುದುವಾಳರ ಸಹಕಾರದೊಂದಿಗೆ ಪ್ರಥಮ ಪ್ರತಿಷ್ಠಾ ವರ್ಧಂತ್ಯುತ್ಸವ ಹಾಗೂ ಮಹಾ ಅನ್ನಸಂತರ್ಪಣೆ ನಡೆಯಲಿದೆ.

ದಿನಾಂಕ 17 ರಿಂದ ಪ್ರತಿದಿನ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ದಿನಾಂಕ 19 ರಂದು ಬೆಳಿಗ್ಗೆ 10 ಗಂಟೆಗೆ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರು ಹಾಗೂ ಶ್ರೀ ನೃಸಿಂಹಾಶ್ರಮ ಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಅಮ್ಮನವರಿಗೆ 108 ಕಲಶ ಸಾನಿಧ್ಯ ಕಲಾಭಿಷೇಕ ನೆರವೇರಲಿದೆ. ಮಧ್ಯಾಹ್ನ 12.30ಕ್ಕೆ ಮಹಾಅನ್ನಸಂತರ್ಪಣೆ ನಡೆಯಲಿದೆ. ಸಂಜೆ 6 ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ. ಪೂಜ್ಯ ಸ್ವಾಮೀಜಿಯವರು ಧಾರ್ಮಿಕ ಮುಖಂಡರು ಪಾಲ್ಗೊಳ್ಳಲಿದ್ದಾರೆ.

ದಿನಾಂಕ 18 ರಂದು ಸಂಜೆ 6 ಗಂಟೆಗೆ




ವಿದೂಷಿ ದೀಪಿಕಾ ಪಾಂಡುರಂಗಿಯವರ ಭಕ್ತಿ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ..

ದಿನಾಂಕ 19 ರಂದು ರಾತ್ರಿ 7 ಗಂಟೆಗೆ ಶ್ರೀ ಬಪ್ಪನಾಡು ಕ್ಷೇತ್ರ ಮಹಾತ್ಮೆ ಯಕ್ಷಗಾನ ಕಾರ್ಯಕ್ರಮ ಏರ್ಪಡಿಸಲಾಗಿದೆ.

19 ರಂದು ಸಂಜೆ ನಡೆಯುವ ಧಾರ್ಮಿಕ ಪ್ರವಚನ ಹಾಗೂ ಸಭಾ ಕಾರ್ಯಕ್ರಮದಲ್ಲಿ ಸುಬ್ರಹ್ಮಣ್ಯ ಮಠಾಧೀಶ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರು ಹಾಗೂ ಬಾಳೆಕುದ್ರು ಮಠದ ಶ್ರೀ ನೃಸಿಂಹಾಶ್ರಮ ಸ್ವಾಮೀಜಿಯವರು ಆಶೀರ್ವಚನ ಮಾಡಲಿದ್ದಾರೆ.

ವೇದಮೂರ್ತಿ ಕುತ್ಯಾರು ಕೇಂಜ ಶ್ರೀಧರ ತಂತ್ರಿಗಳು , ಪುರುಷೋತ್ತಮ್ ಭಟ್ ಮುಂಬೈ , ಎ.ವಿ.ಮಾಧವನ್ ಪುದುವಾಳ್ ಪಯ್ಯನೂರು, ವೇದಮೂರ್ತಿ ಶ್ರೀಧರ ಉಪಾಧ್ಯಾಯರು, ಕುಂಭಾಶಿ, ವೇದಮೂರ್ತಿ ಅನಂತ ಪುರಾಣಿಕರು , ಪ್ರಧಾನ ಅರ್ಚಕರು ಧಾರ್ಮಿಕ ಪ್ರವಚನ ಮಾಡಲಿದ್ದಾರೆ. ಎಲ್ಲಾ ಕಾರ್ಯಕ್ರಮಗಳಿಗೆ ಭಕ್ತಾಭಿಮಾನಿಗಳು ಆಗಮಿಸಿ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಆಡಳಿತ ಧರ್ಮದರ್ಶಿಗಳಾದ ದೇವರಾಯ ಎಂ.ಶೇರೆಗಾರ್ ವಿನಂತಿಸಿದ್ದಾರೆ.




# ಜರ್ಮನಿಯಲ್ಲಿ ಪ್ರಶಾಂತ ಬಸ್ರೂರು ಹತ್ಯೆ : ಕಳವಳ



ಜರ್ಮನಿಯ ಮ್ಯೂನಿಚ್‌ನಲ್ಲಿ ದುಷ್ಕರ್ಮಿಯ ಚೂರಿ ಇರಿತದಿಂದ ಪ್ರಶಾಂತ್ ಬಸ್ರೂರು ಸಾವನ್ನಪ್ಪಿದ ಸುದ್ಧಿಯಿಂದ ಕರಾವಳಿಯ ಜನರಲ್ಲಿ ಕಳವಳ ಉಂಟಾಗಿದೆ. ವಿದೇಶದಲ್ಲಿರುವ ತಮ್ಮ ಕುಟುಂಬ ಸದಸ್ಯರ ಬಗ್ಗೆ ಕಾಳಜಿಯಿಂದ ನೂರಾರು ಕುಟುಂಬದವರು ಎರಡು ದಿನಗಳಿಂದ ಸಂಪರ್ಕಿಸಿ ಜಾಗ್ರತೆ ಹೇಳುತ್ತಾ ಇರುವುದು ಕಂಡುಬಂದಿದೆ.

ಪ್ರಶಾಂತ ಬಸ್ರೂರು ಅವರ ತಂದೆ ಬಸ್ರೂರು ಮೂಲದವರಾಗಿದ್ದು ಸಾಗರದಲ್ಲಿ ನೆಲೆಸಿದ್ದರು. ಪ್ರಶಾಂತ್ ಅವರ ಪತ್ನಿ ಸ್ಮಿತಾ ಕುಂದಾಪುರದ ಸಿದ್ಧಾಪುರ ದವರಾಗಿದ್ದಾರೆ.

(6ನೇ ಪುಟಕ್ಕೆ)